ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

" ಅಭಿವೃದ್ಧಿ ಭವನ " ಐವಾನ-ಎ-ಶಾಹಿ, ಕಲಬುರಗಿ - 585 102

ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527

E-mail : hkadbgulb@gmail.com, hkrdbklb@gmail.com Website : hkrdb.kar.nic.in

ಸಂಖ್ಯೆ:ಹೈ.ಕ.ಪ್ರ.ಅ.ಮಂ./ಯೋಶಾ/ಕ್ರಿಯೋ/ಸಾಮಾನ್ಯ/46/2017-18 1960 ದಿನಾಂಕ: 07 10-07-2017

## -:ಸುತ್ತೋಲೆ :-

ವಿಷಯ:- 2017-18ನೇ ಸಾಲಿನ ಹೈದ್ರಬಾದ ಕರ್ನಾಟಕ ಪ್ರದೇಶ ಅಭಿವೃಧಿ ಮಂಡಳಿಯ ಅನುದಾನ ಬಳಕೆಗೆ ನಿರ್ದೇಶನಗಳು.

*****

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭಿಸಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಪ್ರಕ್ರಿಯೆಗಳನ್ನು ವಿಳಂಬವಿಲ್ಲದೇ ಕೈಗೊಳ್ಳುವುದು ಮತ್ತು ಯೋಜನೆಯನ್ನು ಕಾಲಮಿತಿಯೊಳಗೆ ಸಮರ್ಪಕವಾಗಿ ಅನುಷ್ಠಾನ ಮಾಡಿ ಹೈದ್ರಬಾದ ಕರ್ನಾಟಕ ಪ್ರದೇಶದ ಸಾರ್ವಜನಿಕರಿಗೆ ಹೈದ್ರಬಾದ ಕರ್ನಾಟಕ ಪ್ರದೇಶ ಅಭಿವೃಧಿ ಮಂಡಳಿಯ ಯೋಜನೆಗಳ ಪೂರ್ಣ ಪ್ರಯೋಜನೆ ಪಡೆಯಲು ಅನುವಾಗುವಂತೆ, ಎಲ್ಲಾ ಅನುಷ್ಠಾನ ಇಲಾಖೆಗಳು, ಅಧಿಕಾರಿಗಳು ಹಾಗೂ ಇಂಜಿನಿಯರ್‌ಗಳು ಹೆಚ್ಚಿನ ಪರಿಶ್ರಮ ವಹಿಸುವುದು ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಹೈದ್ರಬಾದ ಕರ್ನಾಟಕ ಪ್ರದೇಶ ಅಭಿವೃಧಿ ಮಂಡಳಿಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ಸಮಯಬದ್ಧತೆಯಿಂದ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ 2017-18ನೇ ಸಾಲಿಗೆ ಹೈದ್ರಬಾದ ಕರ್ನಾಟಕ ಪ್ರದೇಶ ಅಭಿವೃಧಿ ಮಂಡಳಿಯ ಮೈಕ್ರೋ ಹಾಗೂ ಮ್ಯಾಕ್ರೋ ಯೋಜನೆಗಳ ಅನುದಾನ ಬಳಕೆಗೆ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನಿಗಧಿಪಡಿಸಲಾಗಿದೆ.

1. ಮಂಡಳಿಯ ಆದೇಶ ಸಂಖ್ಯೆ: ಹೈಕಪ್ರಅಮಂ/ಯೋಜನೆ/ಮೈಕ್ರೋ/ಬೀದರ್/43/2017-18/503 ದಿನಾಂಕ: 10-05-2017 ರನ್ವಯ ರೂ. 1.00 ಕೋಟಿ ಮೊತ್ತದ ವರೆಗಿನ ಮೈಕ್ರೋ ಮತ್ತು ಮ್ಯಾಕ್ರೋ ವರ್ಗದಡಿಯಲ್ಲಿ ಕಾಮಗಾರಿಗಳಿಗೆ (ಸಾಧನ ಸಲಕರಣೆಗಳ ಖರೀದಿಯನ್ನು ಸೇರಿ) ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಡಳಿತಾತ್ಮಕ ಅನುಮೊದನೆ ನೀಡುವ ಅಧಿಕಾರವನ್ನು ಹೊಂದಿರುತ್ತಾರೆ. ರೂ. 1.00 ಕೋಟಿ ಮೆಲ್ಪಟ್ಟ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೊದನೆಯನ್ನು ಮಂಡಳಿಯ ಕಛೇರಿಯಿಂದ ಪಡೆಯತಕ್ಕದ್ದು.

2. ಪ್ರಸಕ್ತ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಕಾಮಗಾರಿಗಳನ್ನು ಸಂಬಂಧಿಸಿದ ಅನುಷ್ಠಾನ ಇಲಾಖೆಯವರಿಂದ ಠೇವಣಿ ವಂತಿಕೆ (Deposit Contriubution) ಆಧಾರದ ಮೇಲೆ ಅನುಷ್ಠಾನಗೊಳಿಸುತ್ತಿದ್ದು, ಇದರನ್ವಯ ಅನುಷ್ಠಾನ ಇಲಾಖೆಯವರು ಗುತ್ತಿಗೆ ನಿಗಧಿ ಪಡಿಸುವ ಹಾಗೂ ಗುತ್ತಿಗೆದಾರರಿಂದ ಕೆಲಸ ನಿರ್ವಹಿಸಿರುವ ಎರಡು ಹಂತದ ಪ್ರಕ್ರಿಯೆಗಳನ್ನು ನಿರ್ವಹಿಸುತ್ತಾರೆ. ಈ ವಿಧಾನ ಅಲ್ಲದೆ ನಗರ ಪ್ರದೇಶದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಜಿಲ್ಲಾ ನಗರಾಭಿವೃಧಿ ಕೋಶ (DUD, Cell) ದಿಂದ ಟೆಂಡರ್ ಅನುಮೊದನೆಯ ಅಧಿಕಾರದನ್ವಯ ಗುತ್ತಿಗೆ ನಿಗಧಿಪಡಿಸುವ ಹಂತದ ವರೆಗೆ ಕೆಲಸ ನಿರ್ವಹಿಸಿ, ಗುತ್ತಿಗೆದಾರರಿಂದ ಕೆಲಸ ನಿರ್ವಹಿಸುವ ಹಂತದಿಂದ ಅಂದರೆ ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಗಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲು ಜವಾಬ್ದಾರಿಯನ್ನು ಸೂಕ್ತವಾದ ಅನುಷ್ಠಾನ ಇಲಾಖೆಯವರಿಗೆ ಪರ್ಯಾಯ ವಿಧಾನವನ್ನು ನಿಯಾಮವಳಿಯಂತೆ ವಹಿಸಬಹುದಾಗಿದೆ. ಈ ವಿಧಾನವನ್ನು ಗುತ್ತಿಗೆ ನಿಗಧಿ ಪಡಿಸುವ ಪ್ರಕ್ರಿಯೆಯಲ್ಲಿ ಆಗುತ್ತಿರುವ ವಿಳಂಬವನ್ನು ಕಡಿಮೆಗೊಳಿಸಲು ಬಳಸಬಹುದಾಗಿದೆ.

3. ಉಪಕರಣಗಳು / ಪೀಠೋಪಕರಣಗಳಿಗೆ ಟೆಂಡರಿಂಗ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಂಧಿಸಿದ ವಿಷಯ ಪರಿಣೀತರು ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಟೆಂಡರ್ ಕಮಿಟಿಯನ್ನು ರಚಿಸಿ, ಇಲಾಖೆಯಿಂದ ನಿಗದಿಪಡಿಸಿದ ತಾಂತ್ರಿಕ ನಿರ್ದಿಷ್ಟತೆ (Technical Specification) ಅನುಗುಣವಾಗಿ

ಕೆ.ಟಿ.ಪಿ.ಪಿ. ಅನ್ವಯ ನಿಯಮಾನುಸಾರ ಖರೀದಿಸುವುದು. ಸಂಬಂಧಿಸಿದ ಇಲಾಖೆಯು ಸದರಿ ಉಪಕರಣಗಳ/ ಪೀಠೋಕರಣಗಳ ಕುರಿತು ತಾಂತ್ರಿಕ ನಿರ್ದಿಷ್ಟತೆಯನ್ನು (Technical Specification) ಈಗಾಗಲೇ ನಿಗಧಿಪಡಿಸಿದ್ದಲ್ಲಿ ಅದನ್ನೇ ಪಾಲಿಸುವುದು. ಅದರಲ್ಲಿ ಬದಲಾವಣೆಗಳು ಅಗತ್ಯ ಇದ್ದಲ್ಲಿ ಮಂಡಳಿಯ ಮಂಜೂರಾತಿಯೊಂದಿಗೆ ಮಾಡುವುದು. ಉಪಕರಣಗಳ /ಪೀಠೋಪಕರಣಗಳ ನಿರ್ವಹಣೆಯ ವ್ಯವಸ್ಥೆಯನ್ನು ಸಹ ಸಂಬಂಧಿಸಿದ ಇಲಾಖೆಯ ಮೂಖಾಂತರ ಖಾತ್ರಿ ಪಡಿಸುವುದು.

4. ಉಪಕರಣಗಳ / ಪೀಠೋಪಕರಣಗಳ ಖರೀದಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಮಗಾರಿಗಳ ಟೆಂಡರ್ ಪ್ರಿಮಿಯಮ್‌ಗಳಿಗೆ ಮಂಜೂರು ಮಾಡುವ ಅಧಿಕಾರ ಕೇವಲ ಮಂಡಳಿಗೆ ಕಾಯ್ದಿರಿಸಲಾಗಿದೆ. ಇಲ್ಲಿ ಟೆಂಡರ್ ಪ್ರೀಮಿಯಮ್‌ನ್ನು ಚಾಲ್ತಿ ಎಸ್.ಆರ್.ದರಗಳಿಗೆ ಹೋಲಿಕೆ ಮಾಡಿ ಲೆಕ್ಕಮಾಡುವುದು. ಆದರೆ ಉಪಕರಣಗಳು/ಪೀಠೋಪಕರಣಗಳ ಖರೀದಿಗೆ ಸಂಬಂದಿಸಿದಂತೆ ಟೆಂಡರ್ ದರವನ್ನು ಅಂತಿಮಗೊಳಿಸುವ ಅಧಿಕಾರ ಜಿಲ್ಲಾಧಿಕಾರಿಗಳು/ ಮುಖ್ಯಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅವರ ಹಣಕಾಸಿನ ಅಧಿಕಾರ ವ್ಯಾಪ್ತಿಗೆ ಒಳಗೊಂಡಂತೆ (ರೂ.1.00 ಕೋಟಿ ವರೆಗೆ) ಪ್ರತ್ಯೋಜಿಸಲಾಗಿದೆ. ಉಪಕರಣಗಳ/ ಪೀಠೋಪಕರಣಗಳ ದರಗಳನ್ನು ಮಾರುಕಟ್ಟೆಯ ಚಾಲ್ತಿದರ, ಇಲಾಖೆಯಲ್ಲಿ ಬೇರೆ ಯೋಜನೆಗಳಲ್ಲಿ ಖರೀದಿಸಿದ ದರ, ಹೈದ್ರಬಾದ ಕರ್ನಾಟಕ ಪ್ರದೇಶದ ಇತರೆ ಜಿಲ್ಲೆಗಳಲ್ಲಿ ಅಂತೀಮಗೊಳಿಸಿದ ಲಭ್ಯವಿರುವ ದರ ಮುಂತಾದವುಗಳನ್ನು ಆರ್ಥಿಕ ತುಲನಾತ್ಮಕ ಪಟ್ಟಿಯಲ್ಲಿ ನಮೂದಿಸಿ ಅಂತೀಮಗೊಳಿಸುವುದು. ಅಲ್ಲದೆ ಕಾಮಗಾರಿಗಳ ( ಉಪಕರಣಗಳ/ಪೀಠೋಪಕರಣಗಳ ಖರೀದಿ ಸೇರಿ) ಟೆಂಡರ್ ಮೊತ್ತ ಚಾಲ್ತಿ ಎಸ್.ಆರ್. ದರಗಳ ಒಳಗೆ ಇದ್ದಲ್ಲಿ ಕ್ರಿಯಾ ಯೋಜನೆಯಲ್ಲಿ ಅನುಮೋದಿಸಿದ ಮೊತ್ತಕ್ಕಿಂತ ಶೇ. 5 ರಷ್ಟು ಹೆಚ್ಚುವರಿ ಇದ್ದರು ಅದನ್ನು ರೂ. 2.00 ಕೋಟಿ ಮೊತ್ತದ ಒಳಗಿನ ಕಾಮಗರಿಗಳಿಗೆ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿವಾರ್ಹಕ ಅಧಿಕಾರಿಗಳು ಅವರ ಹಂತದಲ್ಲಿಯೇ ಅನುಮೊದಿಸಿ ಮಂಡಳಿಗೆ ಮಾಹಿತಿ ಸಲ್ಲಿಸುವುದು.

5. ಕ್ರಿಯಾ ಯೋಜನೆಯಲ್ಲಿ ಅನುಮೊದನೆಯಾದ ಕಾಮಗಾರಿಗಳಿಗೆ ಮಂಡಳಿವತಿಯಿಂದ ಅನುಷ್ಠಾನ ಇಲಾಖೆಗಳು ನೇಮಿಸದೇ ಇರುವ ಸಂಬಂರ್ಧದಲ್ಲಿ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೆಳಕಂಡಂತೆ ಅನುಷ್ಠಾನ ಇಲಾಖೆಗಳನ್ನು ನೇಮಿಸುವುದು.

| Sl. No. | Type of work | Implementing agency |
|---|---|---|
| 1 | MDR & SH road | PWD |
| 2 | Rural connectivity roads | PMGSY |
| 3 | Internal roads within the village limits | PRED/KRIDL |
| 4 | Internal roads within the City limits | PWD or ULB |
| 5 | Building works | |
| | Low value(Rooms & small building) | PRED/KRIDL |
| | High value | PWD/KRIDL |
| | Innovative and cost saving works (as per the condition prescribed in the concerned KTPP Act exemption order) | NK/ CASHUTECH |
| 6 | Rural water supply works | RWS |
| 7 | Urban water supply and underground drainage works | KUWS & DB |

ಮೇಲೆ ತೋರಿಸಿದಂತಹ ಕಾಮಗಾರಿಗಳನ್ನು ಹೊರತುಪಡಿಸಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಇಲಾಖೆಗಳನ್ನೇ ಅನುಷ್ಠಾನ ಇಲಾಖೆಗಳನ್ನಾಗಿ ನೇಮಿಸುವುದು. ಉದಾಹರಣೆಗೆ ಜಲಾನಯನ ಕಾಮಗಾರಿಗಳನ್ನು ಕೃಷಿ ಇಲಾಖೆಗೆ ವಹಿಸುವುದು. ಒಂದು ವೇಳೆ ಕೆ.ಆರ್.ಐ.ಡಿ.ಎಲ್.ಗೆ ವಹಿಸಿದಲ್ಲಿ ಸರ್ಕಾರಾದ ಅಧಿಸೂಚನೆ ಸಂಖ್ಯೆ:ಆಇ 262 ವೆಚ್ಚ-12/2017 ದಿನಾಂಕ: 22-04-2017ರಂತೆ ಕ್ರಮ ಕೈಗೊಳ್ಳುವುದು, ಹಾಗೂ ಸಂಬಂದಪಟ್ಟ ಕೆ.ಆರ್.ಐ.ಡಿ.ಎಲ್.ಅಧಿಕಾರಿ ಯಿಂದ ಕ್ರಿಯಾ ಯೋಜನೆ ಅನುಮೊದನೆ ನೀಡುವ ಮುಂಚೆ ಹಾಗೂ ಅಂದಾಜು ಪತ್ರಿಕೆಯಲ್ಲಿ ಈ ಕೆಳಕಂಡಂತೆ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆಯುವುದು.

*-: ಪ್ರಮಾಣ ಪತ್ರ :-*

*ಹೈದ್ರಬಾದ ಕರ್ನಾಟಕ ಪ್ರದೇಶ ಅಭಿವೃಧಿ ಮಂಡಳಿಯಿಂದ ವಹಿಸಲಾದ ಎಲ್ಲಾ ಕಾಮಗಾರಿಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ 262 ವೆಚ್ಚ-12/2017 ದಿನಾಂಕ: 22-04-2017 ರಂತೆ ನಿರ್ವಹಿಸಲಾಗುವುದು ಹಾಗೂ ಸದರಿ ಕಾಮಗಾರಿಗಳನ್ನು ನಮ್ಮ ಸಂಸ್ಥೆಯ ಆಂತರೀಕ ಸಂಪನ್ಮೂಲಗಳಿಂದಲೆ ಕಾರ್ಯಗತಗೊಳಿಸಲಾಗುವುದು. ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ ಕೆ.ಟಿ.ಪಿ.ಪಿ ಕಾಯ್ದೆ ಮತ್ತು ಅಧಿನಿಯಮಗಳು, ಇ-ಸಂಗ್ರಹಣೆ ವೇದಿಕೆ ಮೂಲಕವೇ ಕೈಗೋಳ್ಳಲಾಗುವುದೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ. ತಪ್ಪಿದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಕಾನೂನಿನಂತೆ ಕ್ರಮಕ್ಕೆ ಬಧನ್ನಾಗಿರುತ್ತೇನೆ.*

*ಸಹಿ/-*

*ಕೆ.ಆರ್.ಐ.ಡಿ.ಎಲ್. ಅಧಿಕಾರಿ*

ಮುಂದುವರೆದು, ಒಂದು ಅನುಷ್ಠಾನ ಇಲಾಖೆಯವರು ಕಾರ್ಯ ಅನುಷ್ಠಾನದಲ್ಲಿ ಅಕ್ಷಮತೆ ಅಥವಾ ಹಿನ್ನಡೆ ತೋರಿಸಿದಲ್ಲಿ ಮಾತ್ರ ಮೇಲೆ ತಿಳಿಸಿದ ಸೂತ್ರದ ಬದಲಾಗಿ ಬೇರೆ ಅನುಷ್ಠಾನ ಇಲಾಖೆಯನ್ನು ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರ ಹಂತದಲ್ಲಿಯೇ ಸಕಾರಣಗಳೊಂದಿಗೆ ನೇಮಿಸಬಹುದು ಮತ್ತು ಇದಕ್ಕಾಗಿ ಮಂಡಳಿಗೆ ಘಟನ್ನೋತ್ತರ ವರದಿ ಸಲ್ಲಿಸುವುದು. ಈ ಕಾರಣವನ್ನು ಹೊರತು ಪಡಿಸಿ ಬೇರೆ ಯಾವ ಕಾರಣಕ್ಕೆ ಮನಸ್ಸು ಇಚ್ಚೆದಂತೆ ಅನುಷ್ಠಾನ ಇಲಾಖೆಗಳನ್ನು ನೇಮಿಸುವುದು ಅಥವಾ ಬದಲಾಯಿಸುವುದು ಮಾಡತಕ್ಕದ್ದಲ್ಲ.

6. ಕ್ರಿಯಾ ಯೋಜನೆಯಲ್ಲಿ ಅನುಮೊದನೆಯಾದ ಈ ಕೆಳಕಂಡಂತಹ ಕಾಮಗಾರಿಗಳ ಸ್ಥಳ ಬದಲಾವಣೆ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಲಾಗಿದೆ. ಸ್ಥಳ ಬದಲಾವಣೆ ಮಾಡುವಾಗ ಅ ಕಾಮಗಾರಿಗೆ ಸಂಬಂಧಿಸಿದ ಇಲಾಖಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ಸ್ಥಳ ಬದಲಾವಣೆ ಮಾಡಿದ ನಂತರ ಮಂಡಳಿಗೆ ವರದಿ ಸಲ್ಲಿಸುವುದು. ಯಾವುದೇ ಕಾರಣಕ್ಕೆ ಈ ಅವಕಾಶವನ್ನು ಬಳಸಿ ಕಾಮಗಾರಿಗಳ ಸ್ವರೂಪವನ್ನು ಬದಲಾವಣೆ ಮಾಡತಕ್ಕದ್ದಲ್ಲ ಅಂದರೆ ಈ ಅವಕಾಶದ ಅಡಿಯಲ್ಲಿ ಕೇವಲ ಒಂದು ಸ್ವರೂಪದ ಕಾಮಗಾರಿಯ ಸ್ಥಳಬದಲಾವಣೆಯನ್ನು ಮಾತ್ರ ಮಾಡಬಹುದಾಗಿದೆ ಉದಾಹರಣೆ: ಶಾಲಾ ಕೋಣೆಯನ್ನು ಮಂಜೂರಾದ ಒಂದು ಸ್ಥಳದ ಬದಲಾಗಿ ಇನ್ನೊಂದು ಸ್ಥಳದಲ್ಲಿ ನಿರ್ಮಿಸಬಹುದು. ಅಲ್ಲದೆ ಹೊಸ ಸ್ಥಳದಲ್ಲಿ ಶಿಕ್ಷಣ ಇಲಾಖೆಯ ಎಸ್.ಎಸ್.ಎ. ಅಥವಾ ಆರ್.ಎಂ.ಎಸ್.ಎ. ನಿಯಮದಂತೆ ಶಾಲಾ ಕೋಣೆ ಕಟ್ಟಲು ಅವಕಾಶ ಇರುವುದನ್ನು ಖಾತ್ರಿ ಪಡಿಸತಕ್ಕದ್ದು. ಉಳಿದ ಎಲ್ಲಾ ರೀತಿಯ ಬದಲಾವಣೆಗಳಿಗೆ ಮಂಡಳಿಯಿಂದ ಅನುಮೊದನೆ ಪಡೆಯತಕ್ಕದ್ದು.

   i. ಶಾಲಾ ಕೋಣೆಗಳು
   ii. ಅಂಗನವಾಡಿ ಕಟ್ಟಡಗಳು
   iii. ಎ.ಎನ್.ಎಮ್. ಹಾಗೂ ವೈದ್ಯಾಧಿಕಾರಿಗಳ ವಸತಿ ಗೃಹ
   iv. ಎ.ಎನ್.ಎಮ್. ಉಪಕೇಂದ್ರ
   v. ಶಾಲೆಗಳಿಗೆ/ವಸತಿ ನಿಲಯಗಳಿಗೆ ಪೀಠೋಪಕರಣಗಳು
   vi. ಸಾರ್ವಜನಿಕ/ಶಾಲೆ ಶೌಚಾಲಯಗಳು
   vii. Internal rural roads i.e. the roads within a village limit, but the changed road should be within the same village limits.
   viii. Village connectivity roads: these should be changed only if the already approved village connectivity road is not as per PMGSY or NGNR guide lines. Further the new road selected should be as per PMGSY or NGNR guide lines and should strictly be as per the priority list of roads, which have been prepared as per the norms of PMGSY or NGNR scheme.

7. ದಿನಾಂಕ: 12/13-06-2017 ರ ನಡುವಳಿಯಲ್ಲಿ ತಿಳಿಸಿದಂತೆ ಜಿಲ್ಲಾಧಿಕಾರಿಯವರು ಮೂರನೇ ಪಾರ್ಟಿಯಾದ ಪಿ.ಎಂ.ಸಿ.ಗಳು ಒಪ್ಪಂದಂತೆ ಸಿಬ್ಬಂದಿಗಳನ್ನು ನೇಮಿಸಿರುತ್ತಾರೆ ಹಾಗೂ ಒಪ್ಪಂದಂತೆ ಕೆಲಸ ನಿರ್ವಹಿಸುತ್ತಿದಾರೆ ಎಂಬುದನ್ನು ಖಾತ್ರಿ ಪಡಿಸಿ ಜಿಲ್ಲಾಧಿಕಾರಿಗಳ ಹಂತದಲ್ಲಿಯೆ ಆಯಾ ಜಿಲ್ಲೆಗೆ ಸಂಬಂಧಿಸಿದ ಕೆಲಸಕ್ಕಾಗಿ ಪಿ.ಎಂ.ಸಿ.ಗಳಿಗೆ ಒಪ್ಪಂದಂತೆ ಮಂಡಳಿಯಿಂದ ಪ್ರತ್ಯೋಜಿಸಲಾದ ಅಧಿಕಾರದನ್ವಯ ಹಣ ಪಾವತಿಸುವುದು. ಪಿ.ಎಂ.ಸಿ.ಗಳು ನೇಮಿಸಲಾದ ಸಿಬ್ಬಂದಿಗಳನ್ನು ಜಿಲ್ಲಾಧಿಕಾರಿಗಳ ಅನುಮೊದನೆ ಇಲ್ಲದೆ ಬದಲಾಯಿಸತಕ್ಕದ್ದಲ್ಲ.

8. ಹೊಸದಾಗಿ ಅನುಮೊದಿತ ಕಾಮಗಾರಿಗಳ ಮೇಲ್ವಿಚಾರಣಾ ಜವಾಬ್ದಾರಿಯನ್ನು ಇತರೆ ಯೋಜನೆಗಳ ಅಡಿಯಲ್ಲಿ ಅದೇ ಸ್ವರೂಪದ ಕಾಮಗಾರಿಗಳಿಗೆ ನೇಮಿಸಲಾದ ಮೇಲ್ವಿಚಾರಣಾ ಅಧಿಕಾರಿಗಳಾದ ಜಿಲ್ಲಾಧಿಕಾರಿ ಅಥವಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆನೇ ವಹಿಸಿಕೊಡಲಾಗಿರುತ್ತದೆ. ಇದರಲ್ಲಿ ವ್ಯತ್ಯಾಸ ಇದ್ದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರ ಹಂತದಲ್ಲಿ ಸರಿ ಪಡಿಸಿ ಮಾಹಿತಿಯನ್ನು ಮಂಡಳಿಗೆ ಸಲ್ಲಿಸುವುದು. ಇದೇ ರೀತಿ ಈಗಾಗಲೇ ಪ್ರಗತಿಯಲ್ಲಿ ಇರುವಂತಹ ಕಾಮಗಾರಿಗಳಿಗೂ ಸಹ ಅಗತ್ಯ ಇದ್ದಲ್ಲಿ ಸರಿಪಡಿಸುವುದು.

9. ಕ್ರಿಯಾ ಯೋಜನೆಯಲ್ಲಿ ಅನುಮೊದಿತ ಕಾಮಗಾರಿಗಳ ಅನುಷ್ಠಾನಕ್ಕಿಂತ ಪೂರ್ವದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳೊಂದಿಗೆ ಈ ಕೆಳಕಂಡ ವಿಷಯಗಳ ಕುರಿತು ಸಮಾಲೋಚಿಸುವುದು:

   i. ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ಮಾತ್ರ ಆಡಳಿತಾತ್ಮಕ ಅನುಮೊದನೆಯನ್ನು ನೀಡುವುದು.

ii. ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ ಕಾಮಗಾರಿಗಳು ಅನುಷ್ಠಾನಗೊಳಿಸುವಾಗ ಕಡ್ಡಾಯವಾಗಿ ಕರ್ನಾಟಕ ಪಾರದರ್ಶಕ ಕಾಯ್ದೆ 1999 ಹಾಗೂ ನಿಯಮಗಳು 2000 ಮತ್ತು ಇತ್ತೀಚಿನ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು. ಯಾವುದೆ ಕಾರಣಕ್ಕೂ ಕಾಮಗಾರಿಗಳನ್ನು ಪಾರದರ್ಶಕ ಕಾಯ್ದೆಯ ವಿರುದ್ದವಾಗಿ ವಿಭಜನೆ ಮಾಡಕೂಡದು ಹಾಗೂ ಯಾವುದೇ ಕಾಮಗಾರಿಗಳನ್ನು ಅಂದರೆ ರೂ. 5.00 ಲಕ್ಷಕ್ಕಿಂತ ಕಡಿಮೆ ಇದ್ದರು ಟೆಂಡರ್ ಕರೆಯದೇ ತುಂಡು ಗುತ್ತಿಗೆ ಆಧಾರದ ಮೇಲೆ ನೀಡಬಾರದು.

iii. ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಗಳಿಗೆ ಸಂಬಂಧಿಸಿದಂತೆ **"ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಮುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013"** ರಲ್ಲಿ ತಿಳಿಸಿರುವಂತೆ ಯೋಜನೆ ರೂಪಿಸುವುದು, ಅನುದಾನ ಹಂಚಿಕೆ ಮಾಡುವುದು ಹಾಗೂ ಅನುಷ್ಠಾನಗೊಳಿಸುವುದು ಮತ್ತು ಅದರ ಬಗೆ ಸಂಬಂಧಪಟ್ಟ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖಾ ಅಧಿಕಾರಿ / ಎಸ್.ಟಿ ಅಭಿವೃದ್ಧಿ ಅಧಿಕಾರಿಯಿಂದ ಕಡ್ಡಾಯವಾಗಿ ಪ್ರಮಾಣಪತ್ರವನ್ನು ಪಡೆಯಬೇಕು ಹಾಗೂ ಅದನ್ನು ಕಾಮಗಾರಿಯ ಅಂದಾಜು ಪತ್ರಿಕೆಯಲ್ಲಿ ಲಗತ್ತಿಸಬೇಕು. ಯಾವುದೇ ಲೋಪ ದೋಷಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳೇ ನೇರ ಹೊಣೆಗಾರರು.

iv. ಕಾಮಗಾರಿಗಳು ಸಂಬಂಧಿಸಿದ ಇಲಾಖೆಗಳ ನಿಯಮದಂತೆ ಇದೆಯೊ ಇಲ್ಲವೋ? ಉದಾಹರಣೆ: ಶಾಲಾ ಕೋಣೆಗಳನ್ನು ಎಸ್.ಎಸ್.ಎ. ಅಥವಾ ಆರ್.ಎಂ.ಎಸ್.ಎ ಮಾನದಂಡಗಳಂತೆ ತೆಗೆದುಕೊಳ್ಳಲಾಗಿದೆಯೋ ಇಲ್ಲವೋ.

v. ಸದರಿ ಕಾಮಗಾರಿಗಳು ಜಿಲ್ಲಾ ಪಂಚಾಯಿತಿ ಲಿಂಕ್ ಡಾಕ್ಯೂಮೆಂಟ್‌ದಲ್ಲಿ, ರಾಜ್ಯ ಯೋಜನೆಗಳಲ್ಲಿ, ಎಸ್.ಡಿ.ಪಿ., ನಬಾರ್ಡ ಇತ್ಯಾದಿ ಯಾವುದೇ ಇತರೆ ಸ್ಕೀಮ್‌ಗಳಲ್ಲಿ ಪುನರಾವರ್ತನೆ ಆಗುತ್ತಿರುವ ಕುರಿತು ಪರಿಶೀಲಿಸುವುದು.

vi. ಸದರಿ ಕಾಮಗಾರಿಗಳು ಅವಶ್ಯಕತೆ ಇರುವ ಕುರಿತು ಪರಿಶೀಲಿಸಿ ಖಾತ್ರಿ ಪಡಿಸಿಕೊಳ್ಳುವುದು.

vii. ಕಾಮಗಾರಿಗೆ ಸಂಬಂಧಿಸಿದ ನಿವೇಶನ ಲಭ್ಯವಿದೆಯೋ ಇಲ್ಲವೋ? ಈ ಕುರಿತು ಗ್ರಾಮ ಪಂಚಾಯತ್/ಹೊಬಳಿ ಮೊಟ್ಟದ ನೂಡಲ್ ಅಧಿಕಾರಿಗಳ ಸೇವೆಯನ್ನು ಹಾಗೂ ಪಟ್ಟಣ ಪ್ರದೇಶಗಳಲ್ಲಿ ಇತರೆ ಅಧಿಕಾರಿಗಳ ಸೇವೆಯನ್ನು ಪಡೆಯಬಹುದು.

viii. ಮಾದರಿ ವಿನ್ಯಾಸ (Type design) ಇರುವಂತಹ ಕಾಮಗಾರಿಗಳಿಗೆ ಅದರಂತೆಯೆ ಕಡ್ಡಾಯವಾಗಿ ಕೆಲಸ ನಿರ್ವಹಿಸುವುದು. ಉಳಿಕೆ ಕಾಮಗಾರಿಗಳಿಗೆ ಅನುಷ್ಠನ ಇಲಾಖೆ ಅಂದಾಜು ಪತ್ರಿಕೆ ಹಾಗೂ ವಿನ್ಯಾಸವನ್ನು ತಯ್ಯಾರಿಸುವುದು ಹಾಗೂ ಅಗತ್ಯ ಇದ್ದಲ್ಲಿ ಸಂಬಂಧಿಸಿದ ಮೂರನೇ ಸಂಸ್ಥೆಯಾದ ಪಿ.ಎಂ.ಸಿ.ಗಳಿಂದ ಅಂದಾಜು ಪತ್ರಿಕೆ ಮತ್ತು ವಿನ್ಯಾಸವನ್ನು ತಯ್ಯಾರಿ ಮಾಡಿಸುವುದು. ಆದರೆ ಎಲ್ಲಾ ಕಾಮಗಾರಿಗಳಿಗೆ ಕಡ್ಡಾಯವಾಗಿ ಗುಣಮಟ್ಟದ ಪರಿಶೀಲನೆಯನ್ನು ಅನುಷ್ಠಾನ ಇಲಾಖೆಯಲ್ಲದೆ ಸಂಬಂಧಿಸಿದ ಮೂರನೆ ಸಂಸ್ಥೆಯಾದ ಪಿ.ಎಂ.ಸಿ. ಮುಖಾಂತರ ಮಾಡಿಸತಕ್ಕದು. ಇದೇ ರೀತಿ ಉಪಕರಣಗಳ / ಪೀಠೋಪಕರಣಗಳ ಖರೀದಿಯನ್ನು ಸಹ ಸಂಬಂಧಿಸಿದ ಇಲಾಖೆಯಲ್ಲದೆ ಮೂರನೇ ಸಂಸ್ಥೆಯಿಂದ ದೃಢೀಕರಿಸತಕ್ಕದ್ದು.

ix. ಗ್ರಾಮಗಳ ಕೂಡು ರಸ್ತೆ ಕುರಿತಾಗಿ ಈ ಕಛೇರಿಯ ಆದೇಶ ಸಂಖ್ಯೆ: ಹೈ.ಕ.ಪ್ರ.ಅ.ಮಂ/ಯೋಜನೆ/ಸಾಮಾನ್ಯ/2016-17 ದಿನಾಂಕ: 05-06-2017ರಂತೆ ಅಂದಾಜು ಪತ್ರಿಕೆಯ ಪರಿಶೀಲನೆಯನ್ನು ಪಿ.ಎಂ.ಜಿ.ಎಸ್.ವೈ./ಎನ್.ಜಿ.ಎನ್.ಆರ್. ನಿಯಮಾವಳಿಯಂತೆ ರಚಿತಗೊಂಡಿರುವ ಎಸ್.ಟಿ.ಎ. (State Technical Agnecy) ಮುಖಾಂತರ ಕಡ್ಡಾಯವಾಗಿ ಕೈಗೊಳ್ಳುವುದು. ಅನುಷ್ಠಾನ ಇಲಾಖೆಯವರು ಈ ಕೆಲಸಗಳ ಬಾಬ್ತು ಪ್ರಸಕ್ತ ಚಾಲ್ತಿಯಲ್ಲಿರುವ ಪಿ.ಎಂ.ಜಿ.ಎಸ್.ವೈ./ಎನ್.ಜಿ.ಎನ್.ಆರ್.ವೈ. ದರ ಮತ್ತು ನಿಯಮಾವಳಿಯಂತೆ ಎಸ್.ಟಿ.ಎ. ಸೇವಾ ವೆಚ್ಚ ಪಾವತಿಸುವುದು. ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗಳಿಗೆ ಮಂಡಳಿವತಿಯಿಂದ ನಿಯೋಜಿಸಿದ ಪಿ.ಎಂ.ಸಿ. ಸೇವೆಗಳ ಕಾಮಗಾರಿಗಳ ಗುಣಮಟ್ಟದ ಪರಿಶೀಲನೆಯ ಕುರಿತು ಮಾತ್ರ ಬಳಸುವುದು.

x. ಕ್ರಿಯಾ ಯೋಜನೆಯಲ್ಲಿ ಕಾಮಗಾರಿಗಳ ಎದುರು ಅನುದಾನವನ್ನು ಅಂದಾಜಿನಂತೆ (Rough Estimate) ಮಾತ್ರ ತೋರಿಸಲಾಗಿದೆ. ಆದರೆ ಈ ಕಾಮಗಾರಿಗಳನ್ನು ತಾಂತ್ರಿಕ ಸಂಸ್ಥೆಯವರು ತಯ್ಯಾರಿಸಲಾದ ಅಂದಾಜು ಪತ್ರಿಕೆಯ ಮೊತ್ತದಂತೆಯೇ ಅನುಷ್ಠಾನಗೊಳಿಸತಕ್ಕದ್ದು. ಒಂದು ವೇಳೆ ತಾಂತ್ರಿಕ ಸಂಸ್ಥೆಯವರು ತಯ್ಯಾರಿಸಲಾದ ಅಂದಾಜು ಪತ್ರಿಕೆಯ ನಂತೆ ಬೇಕಾಗಿರುವ ಅನುದಾನ ಕ್ರಿಯಾ ಯೋಜನೆಯಲ್ಲಿ ಮಂಜೂರಿಸಿದ ಅನುದಾನಕ್ಕಿಂತ ಕಡಿಮೆ ಇದ್ದಲ್ಲಿ

ಅದನ್ನು ಅಷ್ಟಕ್ಕೆ ಸೀಮಿತಗೊಳಿಸುವುದು ಹಾಗೂ ಒಂದು ವೇಳೆ ಇದು ಹೆಚ್ಚಿದಲ್ಲಿ ಅದನ್ನು ಯಾವ ಕಾಮಗಾರಿಗಳನ್ನು ಕೈಬಿಡಬಹುದು ಅಥವಾ ಯಾವ ಕಾಮಗಾರಿಗಳಲ್ಲಿ ಉಳಿತಾಯ ಮಾಡಬಹುದು ಅ ಕಾಮಗಾರಿಗಳ ಪಟ್ಟಿಯೊಂದಿಗೆ ಮಂಡಳಿಗೆ ಮರೂ ಮಂಜೂರಾತಿಗಾಗಿ ಸಲ್ಲಿಸುವುದು. ಯಾವುದೇ ಕಾರಣಕ್ಕೆ ಕ್ರಿಯಾ ಯೋಜನೆಯಲ್ಲಿ ತೋರಿಸಿದ ಅನುದಾನ ಕಡಿಮೆ ಇರುವ ಹಿನ್ನಲೆಯಲ್ಲಿ ಕಾಮಗಾರಿಗಳನ್ನು ಅವೈಜ್ಞಾನಿಕವಾಗಿ ಅಥವಾ ಅಪೂರ್ಣವಾಗಿ ತೆಗೆದುಕೊಳ್ಳತಕದ್ದಲ್ಲ. ಅದೇ ರೀತಿ ಕ್ರಿಯಾ ಯೋಜನೆಯಲ್ಲಿ ತೋರಿಸಿದ ಅನುದಾನವನ್ನು ಸಂಪೂರ್ಣವಾಗಿ ಬಳಸುವ ಸಲುವಾಗಿ ಕಾಮಗಾರಿಗಳಿಗೆ ಅಗತ್ಯಕ್ಕಿಂತ ಹೆಚ್ಚು ವೆಚ್ಚವನ್ನು ಮಾಡತಕ್ಕದಲ್ಲ.

xi. ಇದೇ ರೀತಿ ಕಾಮಗಾರಿಗಳಿಗೆ ಇಲಾಖೆಯ ಮಾನದಂಡಗಳಂತೆ ಮತ್ತು ಅಗತ್ಯಕ್ಕೆತಕ್ಕಂತೆ ಮಾತ್ರ ಅನುಷ್ಠಾನಕ್ಕೆ ತೆಗೆದುಕೊಳ್ಳತಕ್ಕದ್ದು ಉದಾಹರಣೆಗೆ ಸಿ.ಸಿ. ರಸ್ತೆಯ ಅಗತ್ಯ ಇಲ್ಲದೇ ಇದ್ದಲ್ಲಿ ಕ್ರಿಯಾ ಯೋಜನೆಯಲ್ಲಿ ಮಂಜೂರಿ ಇದ್ದರು ಸಹ ಅವಶ್ಯಕತೆಗೆ ಅನುಗುಣವಾಗಿ ಮಾತ್ರ ರಸ್ತೆ ನಿರ್ಮಿಸುವುದು.

xii. ಕ್ರಿಯಾ ಯೋಜನೆ ಅನುಮೊದನೆಯಲ್ಲಿ ಕಾಮಗಾರಿಗಳಿಗೆ ಪೂರ್ತಿ ಅನುದಾನ ಒದಗಿಸಿರುವ ಹಿನ್ನಲೆಯಲ್ಲಿ ಕ್ರಿಯಾ ಯೋಜನೆಯ ಅನುಮೊದನೆಯನ್ನೆ ತಾತ್ವಿಕ ಆಡಳಿತಾತ್ಮಕ ಅನುಮೊದನೆ ಎಂದು ಭಾವಿಸಿ ಟೆಂಡರ್ ಕರೆಯುವ ಸಲುವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುವುದು ಹಾಗೂ ಕಡ್ಡಾಯವಾಗಿ ಆಡಳಿತಾತ್ಮಕ ಅನುಮೊದನೆ (ಮತ್ತು ಆಡಳಿತಾತ್ಮಕ ಅನುಮೊದನೆ ಹಂತದಲ್ಲಿ ಅಂದಾಜು ಪತ್ರಿಕೆಯಲ್ಲಿ ಎನಾದರು ಬದಲಾವಣೆಯಾಗಿದ್ದಲ್ಲಿ ಪೂನರ ತಾಂತ್ರಿಕ ಮಂಜೂರಾತಿ ಪಡೆದು) ಪಡೆದ ನಂತರವೇ ಟೆಂಡರ್ ಪ್ರಕ್ರಿಯೆಯನ್ನು ಅಂತೀಮಗೊಳಿಸುವುದು.

xiii. ಮಂಜೂರಾದ ಕಾಮಗಾರಿಗಳನ್ನು ಕಾಲಮಿತಿ ಒಳಗಡೆ ಈ ಕೆಳಕಂಡಂತೆ ಅನುಷ್ಠಾನಗೊಳಿಸುವುದು:

a) ಕಾಮಗಾರಿಗಳ ಆಡಳಿತಾತ್ಮಕ ಅನುಮೊದನೆಯನ್ನು ಜುಲೈ–2017ರ ಒಳಗೆ.

b) ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯ ಪೂರ್ಣಗೊಳ್ಳುವಿಕೆಯನ್ನು ಅಲ್ಪಾವಧಿ ಮಾದರಿಯಲ್ಲಿ ಅಂದರೆ ಕೆ.ಟಿ.ಪಿ.ಪಿ. ಕಾಯ್ದೆಯು ನಿಗಧಿಪಡಿಸಿದ ಅರ್ಧದಷ್ಟು ಅವಧಿಯಲ್ಲಿ ಆಗಷ್ಟ–2017ರ ಒಳಗಾಗಿ.

c) ಎಲ್ಲಾ ರಸ್ತೆ ಹಾಗೂ ಒಂದು ಅಂತಸ್ತಿನ ಕಟ್ಟಡ ಕಾಮಗಾರಿಗಳನ್ನು ಡಿಸಂಬರ್–2017ರ ಒಳಗಾಗಿ ಮತ್ತು ಉಳಿಕೆ ಕಾಮಗಾರಿಗಳನ್ನು ಮಾರ್ಚ–2018ರ ಒಳಗಾಗಿ ಪೂರ್ಣಗೊಳಿಸುವುದು.

xiv. ಕಾಮಗಾರಿ ಪೂರ್ಣಗೊಂಡ ನಂತರ ನಿರ್ವಹಣೆ ಜವಬ್ದಾರಿಯನ್ನು ವಹಿಸಿಕೊಳ್ಳುವುದಾಗಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ಅಥವಾ ಇಲಾಖೆ ಒಪ್ಪಿಗೆ ನೀಡಿರುವ ಕುರಿತು ಖಾತ್ರಿ ಪಡಿಸಿಕೊಳ್ಳುವುದು.

xv. ಕಾಮಗಾರಿವಾರು ಕ್ರಿಯಾ ಯೋಜನೆ ಅಂತಿಮಗೊಳಿಸಿ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್/ಗಾಂಧಿ ಸಾಕ್ಷಿ ಕಾಯಕ** ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಪ್ರಗತಿ ವರದಿಯನ್ನು ಸಹ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್/ಗಾಂಧಿ ಸಾಕ್ಷಿ ಕಾಯಕ** ತಂತ್ರಾಂಶದಲ್ಲಿ ಅಪ್‌ಡೇಟ್ ಮಾಡುವುದು.

xvi. ಎಸ್.ಆರ್.ದರದಂತೆ ತಯ್ಯಾರಿಸಲಾದ ಅಂದಾಜು ಪತ್ರಿಕೆ ಮೊತ್ತದ ಮೇಲೆ ಶೇ.1 ರಷ್ಟ ಮೂರನೇ ಸಂಸ್ಥೆ ವೆಚ್ಚಗೊಸ್ಕರ ಕಾಯ್ದಿರಿಸುವುದು.

xvii. ಶುದ್ಧ ಕುಡಿಯುವ ನೀರಿನ ಘಟಕ ಕಾಮಗಾರಿಗಳನ್ನು ಕೈಗೊಳ್ಳುವ ಪೂರ್ವದಲ್ಲಿ ನೀರಿನಲ್ಲಿನ ರಾಸಾಯನಿಕ ಮತ್ತು ಜೀವಶಾಸ್ತ್ರ ಮಾಲಿನ್ಯ ಒಳಗೊಂಡಿರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

xviii. ಅಂದಾಜು ಪತ್ರಿಕೆಗಳನ್ನು ತಾಂತ್ರಿಕ ಪರಿಶೀಲನೆ ಮಾಡಿಕೊಂಡ ಮೇಲೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

xix. ಕಾಮಗಾರಿ ಪ್ರಾರಂಭಿಸುವ ಪೂರ್ವ, ಪ್ರಾರಂಭದ ಹಂತ, ಪ್ರಗತಿ ಹಂತ ಹಾಗೂ ಮುಕ್ತಾಯ ಹಂತ–ಹೀಗೆ ಒಟ್ಟಾರೆ ನಾಲ್ಕು ಹಂತಗಳ ವಿವಿಧ ಸನ್ನಿವೇಶಗಳ ಛಾಯ ಚಿತ್ರಗಳನ್ನು ತೆಗದು ಕಡ್ಡಾಯವಾಗಿ ಕಡತದಲ್ಲಿ ಕಾಯ್ದಿರಸತಕ್ಕದ್ದು, ಪರಿಶೀಲನಾ ಸಮಯದಲ್ಲಿ ಹಾಜರಪಡಿಸತಕ್ಕದ್ದು.

xx. ಕಾಮಗಾರಿಗಳು ಮುಗಿದ ಮೇಲೆ ನಿಗದಿತಿ ನಮೂನೆಯಲ್ಲಿ ಭರ್ತಿಮಾಡಿ ನಿಯಮಾನುಸಾರ ಸಂಬಂಧಪಟ್ಟ ಇಲಾಖೆಗಳಿಗೆ ಅವರುಗಳ ವಶಕ್ಕೆ ಹಾಗೂ ಮುಂದಿನ ನಿರ್ವಹಣೆ ಇತ್ಯಾದಿಗೋಸ್ಕರ ವಹಿಸಿಕೊಡತಕ್ಕದ್ದು/ಹಸ್ತಾಂತರಿಸತಕ್ಕದ್ದು.

xxi. ನಿಗದಿಪಡಿಸಿದ ಅನುದಾನಕ್ಕೆ ಮಾತ್ರ ವೆಚ್ಚ ಭರಿಸತಕ್ಕದ್ದು. ಬಿಡುಗಡೆಯಾದ ಅನುದಾನಕ್ಕೆ ನಿಗದಿತ ನಮೂನೆಯಲ್ಲಿ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು ಮತ್ತು ಹಣ ಬಳಿಕೆ ಪ್ರಮಾಣ ಪತ್ರವನ್ನು ಕಾಮಗಾರಿವಾರು ವರ್ಷವಾರು ಸಲ್ಲಿಸತಕ್ಕದ್ದು.

xxii. ಪ್ರತಿಯೊಂದು ಕಾಮಗಾರಿಗೆ ಕಡ್ಡಾಯವಾಗಿ ಪಿ.ಸಿ.ಆರ್. (Project Completion Report) ವನ್ನು ನೀಡುವುದು.

xxiii. ಮಂಡಳಿಯಿಂದ ನೇಮಿಸಲ್ಪಟ್ಟ 3ನೇ ಪಾರ್ಟಿ ಅವರಿಂದ ಹಂತವಾರು ಕಾಮಗಾರಿ ತಪಾಸಣೆ ಕೈಗೊಳ್ಳಲಾಗುವುದು ಹಾಗೂ 3ನೇ ಪಾರ್ಟಿ ರವರು ವರದಿಗಳನ್ನು ಒಂದು ಪ್ರತಿಯನ್ನು ಗುತ್ತಿಗೆದಾರರಿಗೆ, ಒಂದು ಪ್ರತಿಯನ್ನು ಅನುಷ್ಠಾನ ಇಲಾಖೆಗೆ ಮತ್ತು 2 ಪ್ರತಿಗಳನ್ನು ಜಿಲ್ಲಾಧಿಕಾರಿಗಳಿಗೆ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ 1 ಪ್ರತಿಯನ್ನು ಮಂಡಳಿಗೆ ಸಲ್ಲಿಸುತ್ತಾರೆ. 3ನೇ ಪಾರ್ಟಿಯಲ್ಲಿ ನಮೂದಿಸಿದ ವಿವರಗಳನ್ನು ಪರಿಶೀಲಿಸಿ ನಿಯಮಾನಸಾರ ಕ್ರಮಕೈಗೊಳ್ಳುವುದು. ಅಂತಿಮ ಕಂತಿನ ಪಾವತಿಯನ್ನು 3ನೇ ಪಾರ್ಟಿ ವರದಿ ಸ್ವೀಕರಿಸಿದ ಮೇಲೆ ಮತ್ತು ಧೃಡಿಕರಿಸಿದ ಮೇಲೆ ಪಾವತಿಸತಕ್ಕದ್ದು.

xxiv. ಕಾಮಗಾರಿಗಳ ಗುಣಮಟ್ಟದಲ್ಲಿ ಲೋಪದೋಷಗಳು ಕಂಡು ಬಂದಲ್ಲಿ ಅಥವಾ ಅನುದಾನ ದುರುಪಯೋಗವಾದಲ್ಲಿ ಸಂಬಂಧಪಟ್ಟ ಅನುಷ್ಠಾನ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ನಿಯಾಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವದು.

xxv. ಹಿಂದಿನ ಆರ್ಥಿಕ ವರ್ಷದಲ್ಲಿ ಕೈಗೆತ್ತಿಕೊಂಡ ಎಲ್ಲಾ ಕಾಮಗಾರಿಗಳ ಕುರಿತು ಮುಂಬರುವ ಪ್ರಾರಂಭದ ಆರ್ಥಿಕ ವರ್ಷದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು/ಅನುಷ್ಠಾನಾಧಿಕಾರಿಗಳು ಕಚೇರಿಯಿಂದ ನೇಮಕ ಮಾಡಿದ ಸಿ.ಎ. ಆಡಿಟ್ ಮಾಡಿಸತಕ್ಕದ್ದು. ಆಡಿಟ್ ವರದಿಯ ಪ್ರತಿಯನ್ನು ಸಂಬಂಧಪಟ್ಟ ಜಿಲ್ಲೆಯವರು/ಅನುಷ್ಠಾನದವರು ಇಟ್ಟುಕೊಂಡು ಅದರ ಒಂದು ಪ್ರತಿಯನ್ನು ಮಂಡಳಿ ಕಾರ್ಯಲಯಕ್ಕೆ ಸಲ್ಲಿಸತಕ್ಕದ್ದು.

xxvi. ಅಂದಾಜು ಪತ್ರಿಕೆಗಳಲ್ಲಿ ಯಾವುದೇ ಆಡಳಿತ ವೆಚ್ಚಗಳಿಗೆ ಅವಕಾಶ ನೀಡಕೂಡದ್ದು ಉದಾಹರಣೆಗೆ ಉದ್ಘಟನಾ ಸಮಾರಂಬ, ಅಂದಾಜು ಪತ್ರಿಕೆ ತಯ್ಯಾರಿಕೆ, ಟೆಂಡರ ಇತ್ಯಾದಿಗಳಿಗೆ.

xxvii. ಪ್ರತಿಯೊಂದು ನಾಮ ಫಲಕಕ್ಕೆ ರೂ. 6000/- ಮೀರದಂತೆ, ರಸ್ತೆ ಕಾಮಗಾರಿಗಳಿಗೆ 2 ನಾಮಫಲಕ ಹಾಗೂ ಕಟ್ಟಡ ಕಾಮಗಾರಿಗಳಿಗೆ ಒಂದು ನಾಮಫಲಕ ಅಳವಡಿಸತಕ್ಕದ್ದು.

xxviii. ಉಪಕರಣಗಳು ಹಾಗೂ ಪೀಠೋಪಕರಣಗಳ ಮೇಲೆ ಮಂಡಳಿಯಿಂದ ನೀಡಿರುವ ಮಾದರಿಯಂತೆ ಸ್ಟೀಕರ್‌ಗಳನ್ನು ಅಂಟಿಸತಕ್ಕದ್ದು.

10. ಜಿಲ್ಲಾಧಿಕಾರಿಗಳ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹೈ.ಕ.ಅ.ಮಂಡಳಿಯ ಕೋಶವನ್ನು ಕಾಮಗಾರಿಗಳ ಮೇಲುಸ್ತುವಾರಿ, ಪ್ರಗತಿ ಪರಿಶೀಲನೆ, ಅಂದಾಜು ಪತ್ರಿಕೆಗಳ ಅಡ್ಡ ಪರಿಶೀಲನೆ ಮತ್ತು ವಿಶೇಷ ಪ್ರಕರಣಗಳಲ್ಲಿ ಗುಣಮಟ್ಟದ ಪರಿಶೀಲನೆ ಮಾಡುವುದಕ್ಕಾಗಿ ಉಪಯೋಗಿಸುವುದು. ಅಲ್ಲದೆ ವಿಶೇಷ ಪ್ರಕರಣಗಳಲ್ಲಿ ಅಂದಾಜು ಪತ್ರಿಕೆಗಳ ಅಡ್ಡ ಪರಿಶೀಲನೆಗಾಗಿ ಹಾಗೂ ಗುಣಮಟ್ಟದ ಅಡ್ಡ ಪರಿಶೀಲನೆಗಾಗಿ ಮಂಡಳಿ ಕೇಂದ್ರ ಕಛೇರಿಯ ತಾಂತ್ರಿಕ ಸಲಹೆಗಾರ/ ಟೆಕ್ನಿಕಲ್ ಸ್ಕ್ವಾಡ್ (ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು, ಕಲಬುರಗಿ) ಗೆ ಕಳುಹಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

11. ಅನುಮೊದಿತ ಮೈಕ್ರೋ ಹಾಗೂ ಮ್ಯಾಕ್ರೋ ಕಾಮಗಾರಿಗಳ ಪ್ರಗತಿಯನ್ನು ಕಾಲ ಕಾಲಕ್ಕೆ ಈ ಕೆಳಕಂಡ ಮೂರು ಹಂತದಲ್ಲಿ ಪರಿಶೀಲಿಸುವುದು:

i. ಜಿಲ್ಲಾಧಿಕಾರಿಯವರ/ಮುಖ್ಯ ಕಾರ್ಯನಿರ್ವಹಾಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಅನುಷ್ಠಾನ ಸಮಿತಿ ಸಭೆಯಲ್ಲಿ ಕನಿಷ್ಠ ತಿಂಗಳಿಗೊಮ್ಮೆ (ಈ ಸಭೆಗೆ ಸಮಿತಿ ಸಧ್ಯಸ್ಯರಲ್ಲದೆ ಮೂರನೇ ಪಾರ್ಟಿಯಾದ ಪಿ.ಎಂ.ಸಿ.ಗಳನ್ನು ಸಂಬಂಧಪಟ್ಟ ಗುತ್ತಿಗೆದಾರರನ್ನು ಹಾಗೂ ಗ್ರಾಮ ಪಂಚಾಯತ್ ಮಟ್ಟದ/ಹೋಬಳಿ ಮಟ್ಟದ ನೋಡಲ್ ಅಧಿಕಾರಿಗಳನ್ನು ಕರೆಯುವುದು ಮತ್ತು ತಾಲೂಕುವಾರು/ಕಾಮಗಾರಿವಾರು ಪರಿಶೀಲನೆ ನಡೆಸುವುದು).

ii. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಹೈ.ಕ.ಪ್ರ.ಅ.ಮಂಡಳಿಯ ಜಿಲ್ಲಾ ಸಲಹ ಸಮಿತಿಯಲ್ಲಿ ಕನಿಷ್ಠ ಮೂರು ತಿಂಗಳಿಗೊಮ್ಮೆ.

iii. ಜಿಲ್ಲಾ ಉಸುವಾರಿ ಸಚಿವರ/ ಶಾಸಕರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಜಿಲ್ಲಾ/ತಾಲೂಕು ಕೆಡಿಪಿ ಸಭೆಯಲ್ಲಿ – ಈ ಸಭೆಯಲ್ಲಿ ಕನೀಷ್ಟ ಪಕ್ಷ ಕಾಮಗಾರಿಗಳ ಸಾರಾಂಶ ಪ್ರಗತಿಯನ್ನು ಪರಿಶೀಲುಸುವುದು.

12. ಕ್ರಿಯಾ ಯೋಜನೆಯು ಅನುಮೋದನೆಯಾದ 03 ತಿಂಗಳ ಒಳಗಾಗಿ ಕಾಮಗಾರಿಗಳು ಪ್ರಾರಂಭಿಸದೇ ಇದ್ದಲ್ಲಿ ಸದರಿ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ಸಂಬಂಧಪಟ್ಟವರಿಗೆ ಸಮಾಲೋಚಿಸಿ ರದ್ದುಪಡಿಸಿ ಮಂಡಳಿಗೆ ಮಾಹಿತಿ ಸಲ್ಲಿಸುವುದು. ಈ ರೀತಿ ರದ್ದಾದ ಕಾಮಗಾರಿಗಳಿಂದ ಉಳಿತಾಯ ಆಗಿರುವ ಅನುದಾನವು ಮ್ಯಾಕ್ರೋ ಯೋಜನೆಗೆ ಅದೇ ಜಿಲ್ಲೆಗೆ ವರ್ಗಾಯಿಸಲಾಗುವುದು.

1/7/17

**(ಹರ್ಷ ಗುಪ್ತಾ)**
**ಕಾರ್ಯದರ್ಶಿ,**
**ಹೈ.ಕ.ಪ್ರ.ಅ. ಮಂಡಳಿ, ಕಲಬುರಗಿ.**

<u>ಪ್ರತಿಯನ್ನು ಅನುಪಾಲನೆಗಾಗಿ :</u>

1) ಜಿಲ್ಲಾಧಿಕಾರಿಗಳು, ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆ,
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆ,
3) ಆಯುಕ್ತರು, ಮಹಾನಗರ ಪಾಲಿಕೆ, ಕಲಬುರಗಿ ಮತ್ತು ಬಳ್ಳಾರಿ.
4) ಸಂಬಂಧಿಸಿದ ಎಲ್ಲಾ ಅನುಷ್ಟಾನ ಇಲಾಖೆಗಳಿಗೆ.
5) ಕಚೇರಿ ಪ್ರತಿ.

<u>ಪ್ರತಿಯನ್ನು ದಯಾಪರ ಮಾಹಿತಿಗಾಗಿ:</u>

1) ಮಾನ್ಯ ಅಧ್ಯಕ್ಷಕರು ಹೈ.ಕ.ಪ್ರ.ಅ. ಮಂಡಳಿ ಕಲಬುರಗಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಮಾನ್ಯರ ಗಮನಕ್ಕೆ ತರಲು ಕೋರಲಾಗಿದೆ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳುರು ರವರ ದಯಾಪರ ಮಾಹಿತಿಗಗಿ ಸಲ್ಲಿಸಿದೆ.
3) ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಬೀದರ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆ ರವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಮಾನ್ಯರ ಗಮನಕ್ಕೆ ತರಲು ಕೋರಲಾಗಿದೆ.
4) ಮಾನ್ಯ ವಿಧಾನ ಸಭಾ ಸದಸ್ಯರು, ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆ.
5) ಮಾನ್ಯ ವಿಧಾನ ಪರಿಷತ್ ಸದಸ್ಯರು, ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆ.
6) ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆ,